ಕರ್ನಾಟಕ ಸರ್ಕಾರ

ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/11–ಇ–ನಕ್ಷೆ/ವಿವಾದ/15/2014–15 ದಿ:24–06–2016

| ವಾದಿಗಳು | ವಿರುದ್ದ | ಪ್ರತಿವಾದಿಗಳು |
|---|---|---|
| 1.ಹಂಪಮ್ಮ ಗಂಡ ಮಹಾನಂದರೆಡ್ಡಿ<br>2.ಕೆ.ಪಾಡುರಂಗರೆಡ್ಡಿ ತಂದೆ ಕೆ.ಗರ್ಜಪ್ಪ.<br>ತಾಳೂರು ಗ್ರಾಮ. | | 1.ಪಿ.ಮಹಾನಂದರೆಡ್ಡಿ ತಂದೆ ಪಿ.ಲಿಂಗಾರೆಡ್ಡಿ<br>2.ಸಿದ್ದಪ್ಪ ತಂದೆ ರೇವಣ್ಣ. ತಾಳೂರು ಗ್ರಾಮ<br>ಸಿರುಗುಪ್ಪ ತಾಲೂಕು. |

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ತಾಳೂರು | 103/ಎ/1ಸಿ | 0–36 | ಖುಷ್ಕಿ |

ಪೀಠಿಕೆ;–

ಸಿರುಗುಪ್ಪ ತಾಲೂಕು ತಾಳೂರು ಗ್ರಾಮದ ಸ,ನಂ.103/ಎ/1ಸಿ ವಿ:2–90 ಎಕ್ರೆಯಲ್ಲಿ ವಿ:1–72 ಎಕ್ರೆ ಹಂಪಮ್ಮ ಗಂಡ ಮಹಾನಂದರೆಡ್ಡಿ ಇವರ ಹೆಸರಿಗೆ ಪಹಣಿ ದಾಖಲೆ ಇದ್ದು, ಸದ್ರಿಯವರು ದಿ:02–09–2013 ರಂದು ಕೆ.ಪಾಂಡುರಂಗ ತಂದೆ ಕೆ.ಗಜ್ಜಪ್ಪ ಇವರಿಗೆ ವಿ:0–36 ಸೆಂಟ್ಸ್ ವಿಕ್ರಯ ಮಾಡಲು 11–ಇ ನಕ್ಷೆಗೆ ಅರ್ಜಿ ಸಲ್ಲಿಸಿದ್ದು, ಅರ್ಜಿ ಸಂಖ್ಯೆ:12040312825838 ರ ಪ್ರಕಾರ ಪರವಾನಿಗೆ ಭೂ ಮಾಪಕರು ಸದ್ರಿ ಜಮೀನನ್ನು ಅಳತೆ ಮಾಡಲು ಜಮೀನಿಗೆ ಹೋದಾಗ ದಿ:18–11–2013 ರಂದು ಶ್ರೀ ಪಿ.ಮಹಾನಂದರೆಡ್ಡಿ ತಂದೆ ಪಿ.ಲಿಂಗಾರೆಡ್ಡಿ ಹಾಗೂ ದಿನಾಂಕ:23–11–2013 ರಂದು ಶ್ರೀ ಸಿದ್ದಪ್ಪ ತಂದೆ ರೇವಣ್ಣ ಇವರು ಪ್ರಸ್ತಾಪಿತ ಸ,ನಂ.103–ಎ/1 ಸಿ ವಿ:2–90 ರಲ್ಲಿ ವಿ:0–71 ಸೆಂಟ್ಸ್ ಜಮೀನನ್ನು ತಮ್ಮಿಬ್ಬರಿಗೆ ದಿ:12–10–1983 ರಂದು ಹಂಪಮ್ಮ ಇವರಿಂದ ಕ್ರಯ ಕರಾರು ಮಾಡಿಕೊಂಡಿದ್ದು, ಅಂದಿನಿಂದ ಇಂದಿನವರೆಗೂ ತಾವೇ ಸ್ವಾಧೀನಾನುಭವದಲ್ಲಿರುತ್ತೇವೆಂದು ಸರ್ವೇ ಮಾಡದಂತೆ ತಕರಾರು ಸಲ್ಲಿಸಿರುತ್ತಾರೆಂದು, ದಿ:11–02–2014 ರಂದು ತಕರಾರು ಲಾಗಿನ್‌ಗೆ ವರ್ಗಾಯಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ–ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:14–07–2014 ರಿಂದ ದಿ:21–03–2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ಅರ್ಜಿದಾರರ ವಾದ ಆಲಿಸಲಾಗಿ, ದಾವಾ ಜಮೀನು ಸ,ನಂ.103/ಎ/1ಸಿ ವಿ:1–72 ಎಕ್ರೆ ತಮ್ಮ ಹೆಸರಿಗೆ ಪಹಣಿ ದಾಖಲೆ ಇದ್ದು, ಈ ಭೂಮಿಯಲ್ಲಿ ವಿ:0–36 ಸೆಂಟ್ಸ್ ಕರಾಟ ಮಾಡಲು 11– ನಕ್ಷೆ ತಯಾರಿಸಿ ಕೊಡಲು ಆದೇಶ ನೀಡಲು ಕೋರಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

(18)

ಅದೇರೀತಿ ಪ್ರತಿವಾದಿಗಳು ಸದ್ರಿ ಜಮೀನಿನ ಹಾಲಿ ಪಟ್ಟಾದಾರರಾದ ಹಂಪಮ್ಮ ಇವರು ತಮಗೆ ದಿನಾಂಕ:12-10-1983 ರಂದು ವಿ:0-71 ಸೆಂಟ್ಸ್ ಜಮೀನಿಗೆ ವಿಕ್ರಯ ಕರಾರು ಮಾಡಿಕೊಟ್ಟಿರುತ್ತಾರೆ. ಆದ್ದರಿಂದ ತಮ್ಮ ಜಮೀನು ತಮಗೆ ನೋಂದಣಿ ಮಾಡಿಸಿ ನಂತರ 11-ಇ ನಕ್ಷೆ ನೀಡಲು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

ಒಟ್ಟಾರೆ ಸದ್ರಿ ಪ್ರಕರಣವು 11-ಇ ನಕ್ಷೆಗೆ ಸಂಭಂದಿಸಿದ್ದು, ನಿಯಮಾನುಸಾರ ಸಹಾಯಕ ಭೂ ದಾಖಲೆಗಳ ನಿರ್ದೇಶಕರು ಇವರ ಆದೇಶದಂತೆ ಕ್ರಮ ಜರುಗಿಸಬೇಕಾಗಿರುವುದರಿಂದ, ಪ್ರಕರಣವನ್ನು ಭೂ ಮಾಪನ ಶಾಖೆಗೆ ವರ್ಗಾಯಿಸಲು ಈ ಕೆಳಕಂಡ ಆದೇಶ-

**ಸಂ.ಕಂ/11-ಇ-ನಕ್ಷೆ/ವಿವಾದ/15/2014-15** **ದಿ:24-06-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ತಾಳೂರು ಗ್ರಾಮದ ಸ,ನಂ.103/ಎ/1ಸಿ ವಿ:2-90 ಎಕ್ರೆಯಲ್ಲಿ ವಿ:1-72 ಎಕ್ರೆ ಹಂಪಮ್ಮ ಗಂಡ ಮಹಾನಂದರೆಡ್ಡಿ ಇವರ ಹೆಸರಿಗೆ ಪಹಣಿ ದಾಖಲೆ ಇದ್ದು, ಸದ್ರಿಯವರು ದಿ:02-09-2013 ರಂದು ಪಾಂಡುರಂಗ ತಂದೆ ಕೆ.ಗಜ್ಜಪ್ಪ ಇವರಿಗೆ ವಿ:0-36 ಸೆಂಟ್ಸ್ ವಿಕ್ರಯ ಮಾಡಲು 11-ಇ ನಕ್ಷೆಗೆ ಅರ್ಜಿ ಸಲ್ಲಿಸಿದ್ದು, ಅರ್ಜಿ ಸಂಖ್ಯೆ:12040312825838 ರ ಪ್ರಕಾರ 11-ಇ ನಕ್ಷೆಗೆ ತಕರಾರು ಇದ್ದು, ಸಹಾಯಕ ಭೂ ದಾಖಲೆಗಳ ನಿರ್ದೇಶಕರು ಮುಂದಿನ ಕ್ರಮ ಜರುಗಿಸಬೇಕಾಗಿರುವುದರಿಂದ, ಪ್ರಕರಣವನ್ನು ಭೂ ಮಾಪನ ಶಾಖೆಗೆ ಹಿಂದಿರುಗಿಸಲು ಆದೇಶಿಸಿದೆ.

M. Dutta

**ತಹಶೀಲ್ದಾರರು,ಸಿರುಗುಪ್ಪ**

ಗೆ,

1.ಭೂ ದಾಖಲೆಗಳ ವಿಭಾಗ( ಸರ್ವೇಶಾಖೆ)

2.ವಾದಿ-ಪ್ರತಿವಾದಿಗಳಿಗೆ

3.ಕಛೇರಿ ಕಡತಕ್ಕೆ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರವರ ನ್ಯಾಯಾಲಯ

T.

T. Bojjavanagowda

(T. Sanna Bojjavana Gowda)